<u>ಅಸಲು ದಾವಾ ಸಂಖ್ಯೆ: **-05/2023**</u> ಡಿ.ಡಬ್ಲ್ಯೂ **:-1**

ದಿನಾಂಕಃ **02-09-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ವಾದಿ ಪರ ವಕೀಲರಿಂದ :-</u>

ನಾನು ಪ್ರಥಮ ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಕರಾರು ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳನ್ನು ನಾನೇ ಹೇಳಿ ನಮೂದು ಮಾಡಿಸಿರುತ್ತೇನೆ. ವಾದಿಯು ದಾವೆಯನ್ನು ಜಾಗ ತಮಗೆ ಸೇರಿದ್ದು ಎಂದು ದಾವೆಯನ್ನು ಸಲ್ಲಿಸಿದ್ದಾರೆ. ವಾದಿಯು ಖಾತೆ ನಂ.51 ರ ಆಸ್ತಿಗೆ ಸಂಬಂಧಪಟ್ಟಂತೆ ದಾವೆಯನ್ನು ಸಲ್ಲಿಸಿದ್ದಾರೆ. ಸಾಕ್ಷಿಗೆ ನಿಮ್ಮ ಪ್ರತಿವಾದ ಪತ್ರದಲ್ಲಿ 1 ನೇ ವಾದಿಯ ಹೆಸರಿಗೆ ದಾವಾ ಆಸ್ತಿಯು ಇದ್ದು ಮತ್ತು ದಾವಾ ಆಸ್ತಿಯಲ್ಲಿ 5-6 ದಶಕಗಳಿಂದ ವಾಸವಾಗಿದ್ದಾರೆ ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ತಪ್ಪಾಗಿ ನಮೂದಾಗಿದ್ದು ನಾನೇ ಸ್ವಾಧೀನಾನುಭವದಲ್ಲಿ ಇದ್ದೇನೆ ಎಂದು ನುಡಿಯುತ್ತಾರೆ. ಸದರಿ ಮೇಲ್ಕಂಡ ವಿಚಾರವನ್ನು ನಾನೇ ವಕೀಲರಿಗೆ ಹೇಳಿ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಪ್ರತಿವಾದ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನಿಮಗೆ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಮೊದಲಿಗೆ ಗೊತ್ತಿಲ್ಲ ಎಂದು ಹೇಳಿದ್ದು ತದನಂತರ ನನಗೆ ಗೊತ್ತು ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ಹನುಮಂತಪ್ಪ ಬಿನ್ ನಿಂಗಪ್ಪ ಎಂದರೆ ಸರಿ. ನಮ್ಮ ಅಜ್ಜ ಹನುಮಂತಪ್ಪರವರು ದಾವಾ ಆಸ್ತಿಯನ್ನು ಈಗ್ಗೆ 60 ವರ್ಷಗಳ ಹಿಂದೆ ಖರೀದಿ ಮಾಡಿರುತ್ತಾರೆ. ನಮ್ಮ ಅಜ್ಜ ಹನುಮಂತಪ್ಪರವರು ದಾವಾ ಆಸ್ತಿಯನ್ನು ಗೌರಮ್ಮರವರಿಂದ ಖರೀದಿ ಮಾಡಿರುತ್ತಾರೆ. ನಮ್ಮ ಅಜ್ಜ ಗೌರಮ್ಮರವರಿಂದ ಆಸ್ತಿಯನ್ನು ಖರೀದಿ ಮಾಡಿದ ಬಗ್ಗೆ ನ್ಯಾಯಾಲಯಕ್ಕೆ ಕ್ರಯ ಪತ್ರವನ್ನು ಕೊಟ್ಟಿರುತ್ತೇನೆ. ನಮ್ಮ ಅಜ್ಜನ ಹೆಸರಿಗೆ ದಾವಾ ಆಸ್ತಿಯು ಮುಟೇಷನ್ ಖಾತೆ ಆಗಿರುವ ಬಗ್ಗೆ ದಾಖಲಾತಿಯನ್ನು

ಹಾಜರುಪಡಿಸಿರುವುದಿಲ್ಲ. ಸಾಕ್ಷಿಗೆ ನಿಡಿ-1 ರಿಂದ 4 ದಾಖಲಾತಿಗಳನ್ನು ತೋರಿಸಿ ಸದರಿ ದಾಖಲಾತಿಗಳಲ್ಲಿ ಕ್ರಯ ಪತ್ರ ಇದೆಯೇ ತೋರಿಸಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದರಿ ದಾಖಲಾತಿಗಳನ್ನು ನೋಡಿ ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ, ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನಮ್ಮ ಅಜ್ಜನ ಹೆಸರಿಗೆ ಖಾತೆ ಆಗಿರುವ ಬಗ್ಗೆ ಮುಟೇಷನ್ ದಾಖಲೆಯನ್ನು ಹಾಜರುಪಡಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. 1959-60 ನೇ ಸಾಲಿನಲ್ಲಿ ಯಲ್ಲಮ್ಮ ಕೋಂ ರಾಮಪ್ಪರವರು ದಾವಾ ಆಸ್ತಿಯನ್ನು ಎಸ್ ಆರ್ ನಂ.176/1959-60 ದಿಃ 25-04-1959 ರಂತೆ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಿಂಗಮ್ಮ ಮತ್ತು ಗೌರಮ್ಮರವರಿಂದ ಯಲ್ಲಮ್ಮರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಂಗಮ್ಮ ಕೋಂ ಹನುಮಂತಪ್ಪ ಪೂಜಾರ್, ಗೌರಮ್ಮ ಕೋಂ ಕರಿಯಪ್ಪ ಪೂಜಾರ್ ರವರಿಂದ ನಮ್ಮ ಅಜ್ಜ ಹನುಮಂತಪ್ಪರವರು ಆಸ್ತಿ ನಂ.50 ರಲ್ಲಿ 47.21 ಗಜ ಆಸ್ತಿಯನ್ನು ಎಸ್ ಆರ್ ನಂ.177/1959-60 ರಂತೆ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದೇ ದಿನ ಯಲ್ಲಮ್ಮ ಎಂಬುವವರು ಆಸ್ತಿ ನಂ.50 ರಲ್ಲಿ 47.10 ½ ಗಜ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಎಸ್ ಆರ್ ನಂ.177/1959-60 ರ ಚಕ್ಕುಬಂಧಿಯಲ್ಲಿ ದಕ್ಷಿಣಕ್ಕೆ ಇದೇ ಸರ್ವೇ ನಂಬರ್ ನ ಉಳಿದ ½ ಭಾಗ ಈ ದಿವಸ ಯಲ್ಲವ್ವ ಕ್ರಯಕ್ಕೆ ಪಡೆದ ಕಣ ಈ ಮಧ್ಯೆ ಇರತಕ್ಕಂತ ಸ್ವತ್ತು ಎಂದು ನಮೂದಾಗಿದೆ ಎಂದರೆ ಸರಿ. 1959-60 ನೇ ಸಾಲಿನ ಖಾತೆ ಮತ್ತು ಪಹಣಿ ನಮ್ಮ ಅಜ್ಜನ ಹೆಸರಿನಲ್ಲಿರುವ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸತ್ಯಾಂಶ ಹೊರಬರುತ್ತದೆ ಎಂಬ ಉದ್ದೇಶದಿಂದ ನ್ಯಾಯಾಲಯಕ್ಕೆ ಕ್ರಯ ಪತ್ರವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ-3 ಇ-ಸ್ವತ್ತನ್ನು ಯಾವ ದಾಖಲೆಯ ಆಧಾರದ ಮೇಲೆ ಪಡೆದುಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಅಜ್ಜ ತೀರಿಕೊಂಡ ನಂತರ ಅವರ ಹೆಸರಿನಲ್ಲಿರುವ ಇ-ಸ್ವತ್ತನ್ನು ಹಾಜರುಪಡಿಸಿ ಪಡೆದುಕೊಂಡಿದ್ದೇವೆ ಎಂದು ನುಡಿಯುತ್ತಾರೆ. ನೆಲಹೊನ್ನೆ ಗ್ರಾಮದಲ್ಲಿ ನಾನು ವಾಸವಾಗಿರುವ ಜಾಗದ ಖಾತೆ ನಂ.99. ನಾವು ವಾಸವಾಗಿರುವ ಮನೆಯ ಹಿಂಭಾಗದಲ್ಲಿರುವ ಜಾಗದ ಖಾತೆ

ನಂ.100. ನಮ್ಮ ಅಜ್ಜ ಖರೀದಿ ಮಾಡಿದ ಆಸ್ತಿಯನ್ನು ಹೊರತುಪಡಿಸಿ ಪಂಚಾಯಿತಿ ಕಡೆಯಿಂದ ನಮ್ಮ ಹೆಸರಿಗೆ ಯಾವುದೇ ಆಸ್ತಿ ಮಂಜೂರಾಗಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.